**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 16-07-1969**.

(ओम शान्ति,  बापदादा. अव्यक्त मुरली 16-07-1969)

***ಮಧುಬನನಿವಾಸಿ ಗೋಪರ ಜೊತೆಗೆ ಅವ್ಯಕ್ತ ಬಾಪ್ ದಾದಾರ ಅವ್ಯಕ್ತ ಆತ್ಮಿಕ ಸಂಭಾಷಣೆ.***

(मधुबन निवासी गोपों के साथ अव्यक्त बापदादा की अव्यक्त रूह-रूहान)

ಇಂದು ನಿಮಂತ್ರಣವನ್ನೇಕೆ ಕೊಡಲಾಗಿದೆ? ಕೇವಲ ಮಿಲನಕ್ಕಾಗಿಯೇ ಅಥವಾ ಮತ್ತೇನಾದರೂ ಉದ್ದೇಶವಿದೆಯೋ? ಯಾವ ನಿಮಂತ್ರಣದ ಮೇರೆಗೆ ತಾವೆಲ್ಲ ಈ ಸಂಘಟನೆಯಲ್ಲಿ ಬಂದಿದ್ದೀರಿ? ಮಧುಬನ ನಿವಾಸಿ ಗೋಪರ ಸಮಾಗಮದ ಉದ್ದೇಶವೇನು? ತಮ್ಮೆಲ್ಲರ ಪರಿವರ್ತನಾ ಸಮಾರೋಹವೆಂದು ಬಾಪ್ ದಾದಾ ಬಂದಿದ್ದಾರೆ. ಭಟ್ಟಿಯಲ್ಲಿ ಏಕೆ ಕುಳಿತುಕೊಂಡಿದ್ದೀರಿ? ಪರಿವರ್ತನೆಗಾಗಿ. ಆದ್ದರಿಂದ ಇಂದು ಪರಿವರ್ತನೆಯ ಸಮಾರಂಭದಲ್ಲಿ ಮಿಲನ ಮಾಡುತ್ತಿದ್ದೇವೆ. ಪರಿವರ್ತನೆಯ ಉತ್ಸುಕತೆ ಎಲ್ಲರಲ್ಲೂ ಬಹಳ ಇದೆ. ಇಂದಿನ ಭಟ್ಟಿಯ ಚಾರ್ಟ್ ನಿಂದ ಉತ್ಸಾಹವೂ, ಸಾಹಸವೂ ಇದೆಯೆಂದು ಕಂಡು ಬರುತ್ತಿದೆ. ಈ ಗೋಪರ ಪರಿವರ್ತನೆಯ ಉತ್ಸಾಹದಿಂದ ತಮಗೆ (ಕುಮಾರಕಾ ದಾದಿಗೆ) ಏನೇನು ಕಂಡು ಬರುತ್ತಿದೆ? ಬಿರುಗಾಳಿಯನ್ನು ನೋಡಿ ಮಳೆ ಬರುಬಹುದೆಂದು ಹೇಗೆ ತಿಳಿಯುತ್ತದೆಯೋ ಹಾಗೆಯೇ ಈ ಪರಿವರ್ತನೆಯ ಉತ್ಸಾಹದಿಂದ ತಾವು ಏನೆಂದು ತಿಳಿಯುತ್ತೀರಿ? ಪರಿವರ್ತನೆಯಿಂದ ಏನು ತಿಳಿದುಬರುತ್ತದೆ? ಈ ಪರಿವರ್ತನೆಯ ಉತ್ಸಾಹವು ವಿಶೇಷವಾಗಿ ಈಗ ಪ್ರತ್ಯಕ್ಷತೆಯ ಸಮಯ ಸಮೀಪ ಬಂದಿದೆ ಎಂಬ ಮಾತನ್ನು ಪರಿಚಯಿಸುತ್ತದೆ. ಮೊದಲು ಪ್ರತ್ಯಕ್ಷತೆಯಾಗುವುದು ನಂತರ ಈ ಸೃಷ್ಟಿಯ ಮೇಲೆ ಸ್ವರ್ಗ ಪ್ರಖ್ಯಾತವಾಗುವುದು. ಇದಾಗಿದೆ ಪ್ರತ್ಯಕ್ಷತೆಯ ಸಂಕೇತ.

ವರ್ತಮಾನದಲ್ಲಿ ಪ್ರತಿಯೊಬ್ಬರೂ ತಮ್ಮ ಪ್ರತ್ಯಕ್ಷತೆಯನ್ನು ಪ್ರತ್ಯಕ್ಷ ರೂಪದಲ್ಲಿ ತರುವುದು ಕಂಡುಬರುತ್ತಿದೆ. ಸೂರ್ಯನ ಪ್ರಕಾಶದಲ್ಲಿ ನಕ್ಷತ್ರಗಳು ಮುಚ್ಚಿಕೊಂಡಿರುವಂತೆ ಮೊದಲು ಗುಪ್ತವಾಗಿತ್ತು. ಯಾವಾಗ ಸೂರ್ಯ ಮತ್ತೊಂದು ದಡಕ್ಕೆ ಹೋಗುತ್ತಾನೋ ಆಗ ನಕ್ಷತ್ರಗಳ ಹೊಳಪು ಪ್ರತ್ಯಕ್ಷವಾಗುತ್ತದೆ. ಈಗ ಜ್ಞಾನ ಸೂರ್ಯ ವ್ಯಕ್ತ ದಡವನ್ನು ಬಿಟ್ಟು ಅವ್ಯಕ್ತವತನದಲ್ಲಿ ನಿಂತಿರುವುದರಿಂದ ವ್ಯಕ್ತ ದೇಶದಲ್ಲಿ ತಾವೆಲ್ಲ ನಕ್ಷತ್ರಗಳ ಪ್ರತ್ಯಕ್ಷತೆ ಕಂಡುಬರುತ್ತಿದೆ. ಮೊದಲಿಗಿಂತಲೂ ಈಗ ಪರಸ್ಪರರು ಹೆಚ್ಚು ಪರಿಚಿತರಾಗಿದ್ದೀರಿ, ಒಂದೊಂದು ನಕ್ಷತ್ರದಲ್ಲಿಯೂ ಪ್ರಪಂಚವಿದೆಯೆಂದು ಹೇಳುತ್ತಾರಲ್ಲವೇ? ಆದರೆ ಒಂದೊಂದು ನಕ್ಷತ್ರದ ಪ್ರಪಂಚ ಯಾವುದೆಂದು ಗೊತ್ತಿಲ್ಲ. ಈ ಆಕಾಶದ ನಕ್ಷತ್ರಗಳಲ್ಲಿ ಯಾವುದೇ ಪ್ರಪಂಚವಿಲ್ಲ. ಆದರೆ ಈ ಭೂಮಿಯ ಮೇಲಿನ ಚೈತನ್ಯ ನಕ್ಷತ್ರಗಳಲ್ಲಿ ಒಂದೊಂದು ಪ್ರಪಂಚವಿದೆ. ತಮ್ಮ ಪ್ರಪಂಚದ ಸಾಕ್ಷಾತ್ಕಾರ ಆಗುತ್ತಿದೆಯೇ? ತಮ್ಮೆಲ್ಲರ ಸಂಗಮದ ಸಂಪೂರ್ಣ ರೂಪವನ್ನು ಸ್ವಲ್ಪ ಸಮಯದಲ್ಲಿ ನೋಡುವಿರಿ. ಸಂಗಮದ ಸಂಪೂರ್ಣ ರೂಪ ಯಾವುದು? ಶಕ್ತಿಯರ ಮತ್ತು ಪಾಂಡವರ ರೂಪದಲ್ಲಿ. ಸಂಗಮದ ಸಂಪೂರ್ಣ ರೂಪ ತಮ್ಮೆಲ್ಲರಿಗೂ ತಮ್ಮಲ್ಲಿಯೇ ಅನುಭವವಾಗುವುದನ್ನು ಈಗ ಪ್ರತ್ಯಕ್ಷ ನೋಡುವಿರಿ. ನಮ್ಮ ಭಕ್ತರಾರು, ನಮ್ಮ ಪ್ರಜೆಗಳಾರೆಂದು ಗೊತ್ತಾಗುತ್ತದೆ. ಪ್ರಜೆಗಳಾಗುವವರು ಸಮೀಪ ಬರುವರು ಮತ್ತು ಭಕ್ತರಾಗುವವರು ಕೊನೆಗೆ ಪಾದಗಳಿಗೆ ನಮಸ್ಕಾರ ಮಾಡುವರು. ಆದ್ದರಿಂದ ಪ್ರತಿಯೊಂದು ನಕ್ಷತ್ರದಲ್ಲಿಯ ರಾಜಧಾನಿ ಅಥವಾ ಪ್ರಪಂಚ ಈಗ ಪ್ರತ್ಯಕ್ಷ ರೂಪ ಪಡೆಯುವುದು. ಪ್ರತ್ಯಕ್ಷವಾದಾಗ ಎಲ್ಲರೂ ಅಹೋ ಪ್ರಭು ಎಂದು ಘೋಷಣೆ ಮಾಡುವರು. ಈಗ ಈ ಸಮಯ ಸಮೀಪ ಬರುತ್ತಿದೆ. ಆದ್ದರಿಂದ ಈಗ ನೀವು ಬೇಗನೆ ಪರಿವರ್ತನೆ ತರಬೇಕು.ತಾವು ರಚಯಿತರಾಗಿದ್ದೀರಲ್ಲವೇ? ರಚಯಿತನಿಗೆ ತನ್ನ ರಚನೆಯ ಕಡೆಗೆ ಗಮನವಿರಬೇಕು.

ಈ ಸಮಯದಲ್ಲಿ ಬಾಪ್ ದಾದಾರವರು ಸ್ನೇಹ ಮತ್ತು ಸಾಹಸವನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಪ್ರತಿಯೊಬ್ಬರಲ್ಲಿಯೂ ಸ್ನೇಹ ಮತ್ತು ಸಾಹಸವಿದೆ. ಕೇವಲ ಅದರ ಬೀಜವಷ್ಟೇ ಅಲ್ಲ, ಆ ಬೀಜದ ಪ್ರತ್ಯಕ್ಷ ಫಲವೂ ಕಂಡು ಬರುತ್ತದೆ. ಆ ಪ್ರತ್ಯಕ್ಷ ಫಲವನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಆದರೆ ಫಲ ಬಂದಾಗ ಅದರ ಕಾಳಜಿ ಬಹಳ ಮಾಡಬೇಕು. ತಾವೂ ಸಹ ಈ ಫಲದ ಕಾಳಜಿ ಮಾಡಿ, ಏಕೆಂದರೆ ಈ ಫಲವನ್ನು ಕೇವಲ ಬಾಪ್ ದಾದಾರವರಿಗೆ ಮಾತ್ರ ಸ್ವೀಕಾರ ಮಾಡಿಸಬೇಕು. ಮಧ್ಯದಲ್ಲಿಯೇ ಮಾಯೆಯ ರೂಪದಲ್ಲಿ ಪಕ್ಷಿ ಆ ಹಣ್ಣನ್ನು ಎಂಜಲು ಮಾಡದಂತೆ ಎಚ್ಚರಿಕೆಯನ್ನು ವಹಿಸಬೇಕು. ಫಲ ಮಾಗುವಾಗ ಪಕ್ಷಿ ಅದನ್ನು ತಿನ್ನಲು ಬಹಳ ಪ್ರಯತ್ನಿಸುತ್ತದೆ. ಅಂತೆಯೇ ಮಾಯೆಯೂ ಸಹ ಈ ಹಣ್ಣನ್ನು ತಿನ್ನಲು ಪ್ರಯತ್ನಿಸುತ್ತದೆ ಆದರೆ ತಾವು ಯಾರಿಗಾಗಿ ಹಣ್ಣನ್ನು ಮಾಗಿಸಿದ್ದೀರಿ? ಅದರ ಪೂರ್ಣ ಕಾಳಜಿ ಮಾಡಬೇಕು. ಇನ್ನೂ ಈಗ ಫಲ ಬಿಟ್ಟಿದೆ ಆದರೆ ಪೂರ್ಣ ಮಾಗಿದಾಗ ಅದನ್ನು ಸ್ವೀಕಾರ ಮಾಡುವೆವು, ಅಲ್ಲಿಯವರೆಗೂ ಕಾಳಜಿ ತೆಗೆದುಕೊಳ್ಳಬೇಕು. ಅದಕ್ಕಾಗಿ ಯಾವ ಸಾಧನ ತಮ್ಮ ಬಳಿಯಿದೆ? ಹಣ್ಣು ಸ್ವಲ್ಪವಾದರೂ ಎಂಜಲಾದರೆ ಸ್ವೀಕಾರ ಮಾಡಲಾಗುವುದೇ?ಈಗ ಭರವಸೆಯಂತೂ ಚೆನ್ನಾಗಿದೆ. ಎಲ್ಲರ ಮಸ್ತಕದಲ್ಲಿ ಆತ್ಮನ ನಕ್ಷತ್ರ ಕಂಡು ಬರುತ್ತದೆ ಆದರೆ ಅದರ ಜೊತೆಗೆ ತಮ್ಮ ಮಸ್ತಕದಲ್ಲಿ ಏನು ಹೊಳೆಯುತ್ತಿದೆ? ಭರವಸೆಯ ನಕ್ಷತ್ರ ಹೊಳೆಯುತ್ತಿರುವಂತೆ ಬಾಪ್ ದಾದಾ ನೋಡುತ್ತಿದ್ದಾರೆ. ಈ ನಕ್ಷತ್ರದ ಮುಂದೆ ಮೋಡಗಳು ಬರದಂತೆ ನೋಡಿಕೊಳ್ಳಿ. ಇಲ್ಲವಾದರೆ ನಕ್ಷತ್ರ ಮುಚ್ಚಿ ಹೋಗುವುದು. ಹೊಳೆಯುತ್ತಿರುವ ಭರವಸೆಯ ನಕ್ಷತ್ರದ ರಕ್ಷಣೆಯನ್ನು ಮಾಡಿ.

ಸ್ಥೂಲ ಅಥವಾ ಸೂಕ್ಷ್ಮ ಕಾರ್ಯದಲ್ಲಿ ಸಾಹಸವನ್ನು ಮತ್ತು ಪರಸ್ಪರ ಸ್ನೇಹವನ್ನು ಬಿಡಬೇಡಿ, ಆಗ ಪಾಂಡವರ ಜಯ-ಜಯಕಾರವಾಗುವುದು, ಘೋಷಣೆಗಳು ಕೇಳಿಬರುವವು. ಈಗ ಇನ್ನೂ ಅಲ್ಲಲ್ಲಿ ಅಲ್ಪ ಸ್ವಲ್ಪ ನಡೆಯುತ್ತಿದೆ. ಜಯ-ಜಯಕಾರವಾದಾಗ ನಾಟಕ ಸಮಾಪ್ತಿವಾಗುವುದು. ನಂತರ ತಮ್ಮೆಲ್ಲರಿಗೂ ಅವ್ಯಕ್ತ ಸ್ಥಿತಿಯ ಧ್ವಜ ದೂರದಿಂದಲೇ ಕಂಡು ಬರುವುದು, ತಮ್ಮೆಲ್ಲರ ಅವ್ಯಕ್ತ, ಏಕರಸ ಸ್ಥಿತಿಯ ಹಾರುತ್ತಿರುವ ಧ್ವಜ ಜಗತ್ತಿಗೆಲ್ಲ ಕಂಡು ಬರುವುದು. ಇಂದು ಈ ಪರಿವರ್ತನೆಯ ಪ್ರತಿಜ್ಞೆಯ ಕಂಕಣವನ್ನು ಕಟ್ಟಲಾಗಿದೆ, ಇದನ್ನು ಅವಿನಾಶಿಯಾಗಿಟ್ಟುಕೊಳ್ಳಿ, ಕಂಕಣವನ್ನು ಬಿಚ್ಚಬೇಡಿ. ಯಾವುದೇ ಕಂಕಣವನ್ನು ಕಟ್ಟಿಕೊಂಡ ಮೇಲೆ ಆ ಕಾರ್ಯ ಸಫಲವಾಗುವವರೆಗೆ ಅದನ್ನು ಬಿಚ್ಚುವುದಿಲ್ಲ. ಅದೇ ರೀತಿ ಈ ಕಂಕಣವನ್ನು ಬಿಚ್ಚಬೇಡಿ.

ಇನ್ನು ಮುಂದೆ ಅನೇಕ ಸುಂದರ ದೃಶ್ಯಾವಳಿಗಳು ಬರುವವು. ಆದರೆ ಅವುಗಳು ತಮ್ಮ ಪರಿವರ್ತನೆಯನ್ನು ಸಮೀಪ ತರುವವು. ತಮ್ಮ ಬೆಲೆಯೂ ತಿಳಿಯುವುದು ಆಗ ನಶೆ ಏರುವುದು. ಈಗ ಒಮ್ಮೊಮ್ಮೆ ಒಂದೊಂದು ಬೆಲೆ ಇಡುತ್ತೀರಿ ಆದ್ದರಿಂದ ಬೆಲೆ ಹೆಚ್ಚು-ಕಡಿಮೆ ಆಗುತ್ತದೆ. ಹೇಗೆ ಯಾವುದೇ ಒಂದು ವಸ್ತು ಹೊಸದಾಗಿ ಬಂದಾಗ ಬೆಲೆ ಹೆಚ್ಚು ಕಡಿಮೆಯಾಗುತ್ತದೆ ನಂತರ ನಿಗದಿಯಾಗುತ್ತದೆ. ತಮ್ಮ ಬೆಲೆಯೂ ಇನ್ನು ಅಂತಿಮವಾಗಿ ಗೊತ್ತಾಗಿಲ್ಲ. ಕೆಲವು ವೇಳೆ ಹೆಚ್ಚು ಬೆಲೆಯೆಂದು ಇನ್ನು ಕೆಲವು ವೇಳೆ ಕಡಿಮೆಯೆಂದು ತಿಳಿಯುತ್ತೀರಿ. ಆದರೆ ಯಥಾರ್ಥ ಪ್ರತಿಯೊಬ್ಬರ ಬೆಲೆಯೇನೆಂದು ಇನ್ನು ಬೇಗನೆ ತಿಳಿಯುವುದು.

ಎಲ್ಲಿ ತಾವೆಲ್ಲ ಕುಳಿತಿರುವಿರೋ, ಈ ಮಧುಬನ ಅದು ಇಡೀ ಸೃಷ್ಟಿಯ ಮಧ್ಯದಲ್ಲಿ ಏನಾಗಿದೆ? ಮಧುಬನವಾಗಿದೆ ಬಾಪ್ ದಾದಾರವರ ಇಡೀ ವಿಶ್ವದ ಮಧ್ಯದಲ್ಲಿ ಬಹಳ ಪ್ರೀತಿಯಿಂದ ತಯಾರಿಸಲ್ಪಟ್ಟ ಶೋ ಕೇಸ್. ಹೇಗೆ ಶೋಕೇಸ್ ನಲ್ಲಿ ಒಳ್ಳೊಳ್ಳೆಯ ವಸ್ತುಗಳನ್ನು ಮತ್ತು ಅತ್ಯುತ್ತಮವಾದುದನ್ನು ಇಡುತ್ತಾರೆ, ಹಾಗೆಯೇ ಮಧುಬನ ಇಡೀ ಜಗತ್ತಿಗೆ ಶೋಕೇಸ್ ಆಗಿರುವುದರಿಂದ ತಾವೆಲ್ಲ ಅಮೂಲ್ಯ ರತ್ನಗಳನ್ನು ಇಡಲಾಗಿದೆ. ಮಧುಬನದ ಶೋಕೇಸ್ ನಲ್ಲಿ ನಾವು ಅಮೂಲ್ಯ ರತ್ನಗಳೆಂಬುದು ಗೊತ್ತಿದೆಯೇ? ಶೋಕೇಸ್ ನಲ್ಲಿ ಇಡುವಂತಹ ವಸ್ತುಗಳ ಕಡೆಗೆ ವಿಶೇಷ ಗಮನವಿಡಲಾಗುತ್ತದೆ. ತಾವೂ ಸಹ ಶೋಕೇಸ್ ನ ಮುಖ್ಯ ರತ್ನವಾಗಿದೀರಿ, ತಮ್ಮನ್ನು ನೋಡಿ ಎಲ್ಲರೂ ಒಳಗೆ ಏನಿದೆ ಎಂದು ತಿಳಿಯುವರು. ಆದರೆ ಒಂದು ಮಾತನ್ನು ನೆನಪಿಟ್ಟುಕೊಂಡಾಗ ಶೋಕೇಸ್ ನಲ್ಲಿ ಶೋ ಮಾಡುತ್ತೀರಿ. "**ನಾವು ಯಾವ ಕರ್ಮಗಳನ್ನು ಮಾಡುತ್ತೇವೆಯೋ ಅವುಗಳನ್ನು ನೋಡಿ ಬೇರೆಯವರು**

**ಮಾಡುವರು"** . ನಾನು ಒಬ್ಬನೇ ಇಲ್ಲ, ನನ್ನ ಹಿಂದೆ-ಮುಂದೆ ಇಡೀ ರಾಜಧಾನಿಯಿದೆ ಎಂದು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ನನ್ನ ಪ್ರಜೆಗಳು, ಭಕ್ತರು ನನ್ನನ್ನು ನೋಡುತ್ತಿದ್ದಾರೆ. ನಾನು ಒಂಟಿಯಾಗಿಲ್ಲ. ಒಂಟಿಯಾಗಿ ಯಾವ ಕೆಲಸವನ್ನು ಮಾಡಲಾಗುತ್ತದೆಯೋ ಅದರ ಬಗೆಗೆ ಇಷ್ಟು ವಿಚಾರವಿರುವುದಿಲ್ಲ. ಈಗ ತಮ್ಮನ್ನು ತಮ್ಮ ಪ್ರಜೆ ಮತ್ತು ಭಕ್ತರ ಮಧ್ಯದಲ್ಲಿರುವವರೆಂದು ತಿಳಿಯಿರಿ. ಎಲ್ಲರೂ ತಮ್ಮನ್ನು ಅನುಸರಿಸುತ್ತಿದ್ದಾರೆ. ಕ್ಷಣಕ್ಷಣವೂ ತಾವಿಡುವ ಹೆಜ್ಜೆ, ತಮ್ಮ ಸಂಸ್ಕಾರಗಳು ತಮ್ಮ ಭಕ್ತರಲ್ಲಿ ಮತ್ತು ಪ್ರಜೆಗಳಲ್ಲಿ ತುಂಬುತ್ತಾ ಇರುತ್ತದೆ. ತಾಯಿಯ ಗರ್ಭದ ಕಾಳಜಿ ಮಾಡಲಾಗುತ್ತದೆ ಏಕೆಂದರೆ ತಾಯಿ ಏನು ಮಾಡುವಳೋ, ಏನನ್ನು ತಿನ್ನುವಳೋ ಆ ಸಂಸ್ಕಾರಗಳು ಮಗುವಿನಲ್ಲಿ ತುಂಬುವವು. ಹಾಗಾದರೆ ನಾವು ಕೂಡ ಅಷ್ಟು ಕಾಳಜಿಯನ್ನು ವಹಿಸಬೇಕು. ಹೇಗೆ ನಾವು ಕರ್ಮ ಮಾಡುತ್ತೇವೆಯೋ ನಮ್ಮನ್ನು ನೋಡಿ ನಮ್ಮ ಪ್ರಜೆ ಮತ್ತು ನಮ್ಮ ದ್ವಾಪರದಿಂದ ಕಲಿಯುಗದವರೆಗಿನ ಭಕ್ತರೂ ಆಗುವರು. ಮಂದಿರವೂ ಹಾಗೆಯೇ ಆಗುವುದು. ಮೂರ್ತಿಯೂ ಹಾಗೆಯೇ ಆಗುವುದು, ಮಂದಿರಕ್ಕೆ ಸ್ಥಾನವೂ ಹಾಗೆಯೇ ಸಿಗುವುದು ಆದ್ದರಿಂದ ತಾವೆಲ್ಲರೂ ಬಹಳಷ್ಟು ಗಮನ ಕೊಡಬೇಕು. ನಾವು ಈಗ ಒಂಟಿಯಾಗಿಲ್ಲವೆಂಬುದನ್ನು ಸದಾ ಗಮನದಲ್ಲಿಟ್ಟುಕೊಳ್ಳಿ.

ನಾವು ಮಾಸ್ಟರ್ ರಚಯಿತರೊಂದಿಗೆ ರಚನೆಯೂ ಇದೆ. ತಂದೆ- ತಾಯಿ ತಾವಷ್ಟೇ ಇರುವಾಗ ಏನೇ ಮಾಡಿದರೂ ಮಕ್ಕಳ ಮುಂದೆ ಎಷ್ಟು ಎಚ್ಚರಿಕೆ ವಹಿಸುತ್ತಾರೆ. ಆದ್ದರಿಂದ ತಾವೂ ರಚಯಿತರಾಗಿರುವಿರಿ, ರಚಯಿತನು ಏನು ಮಾಡುತ್ತಾನೆಯೋ ರಚನೆಯೂ ಅದನ್ನೇ ಮಾಡುವುದು. ಯಾವಾಗ ತಮ್ಮ ಮೇಲೆ ಜವಾಬ್ದಾರಿಯೆಂದು ತಿಳಿಯುತ್ತೀರೋ ಆಗ ಹುಡುಗಾಟಿಕೆ ಮತ್ತು ಆಲಸ್ಯ ಸಮಾಪ್ತಿಯಾಗುವುದು. ಯಾವ ಜವಾಬ್ದಾರಿ? ಯಾವ ಕರ್ಮಗಳನ್ನು ನಾವು ಮಾಡುತ್ತೇವೆಯೋ .....

ಪ್ರತಿಯೊಂದು ನಕ್ಷತ್ರವೂ ತನ್ನ ಜಗತ್ತಿನ ನಿರ್ಣಯವನ್ನು ಮಾಡಬೇಕಾಗಿದೆ, ಕೆಲವರದು ದೊಡ್ಡದಾಗಿದೆ ಕೆಲವರದು ಚಿಕ್ಕದಾಗಿದೆ.

ಜೀವನಪರ್ಯಂತ ನೆನಪಿಟ್ಟುಕೊಳ್ಳುವುದಕ್ಕಾಗಿಯೇ ಸಮಾರಂಭಗಳನ್ನು ಮಾಡುತ್ತಾರೆ. ಈ ಸಮಾರಂಭವೂ ಅದಕ್ಕಾಗಿಯೇ ಇದೆ. ಇಂದಿನ ದಿನ ನೆನಪಿಟ್ಟುಕೊಳ್ಳುವ ದಿನ. ಸಮಾರಂಭದಂದು ಚಿಹ್ನೆಯನ್ನು ಕೊಡಲಾಗುತ್ತದೆಯಲ್ಲವೇ? ಬಾಪ್ ದಾದಾ ಯಾವ ಚಿಹ್ನೆಗಳನ್ನು ಕೊಡುವರು? ವಿಶೇಷ ಮಧುಬನದವರಿಗೆ ಬಾಪ್ ದಾದಾ ಎರಡು ಮಾತುಗಳ ಕಾಣಿಕೆ ಕೊಡುತ್ತಾರೆ. ಶಿಕ್ಷಣವಂತೂ ಸಿಕ್ಕಿದೆ ಸಾಹಸ ಮತ್ತು ಸ್ನೇಹವನ್ನು ಬಿಡಬೇಡಿ. ಯಾವ ಕಾಣಿಕೆಯನ್ನು ಕೊಡುತ್ತಿದ್ದಾರೆ? 1) ಒಬ್ಬನ ನೆನಪಿನಲ್ಲಿ ಸದಾಕಾಲ ಇರುವುದು, ಮತ್ತು 2) ಉಳಿತಾಯ ಮಾಡುವುದು. ಒಬ್ಬನ ನೆನಪು ಮತ್ತು ಉಳಿತಾಯ (economy), ಇವೆರಡು ಇಂದಿನ ಸಮಾರಂಭದ ಕಾಣಿಕೆಗಳು (ಏಕನಾಮಿ ಮತ್ತು ಎಕಾನಮಿ). ಯಾರು ಎಷ್ಟು ತಮ್ಮ ಕಡೆಗೆ ಆಕರ್ಷಿಸಲು ಪ್ರಯತ್ನಪಟ್ಟರೂ ಒಬ್ಬನನ್ನು ಬಿಟ್ಟರೆ ಇನ್ನೊಬ್ಬನಿಲ್ಲ ಎಂಬುದಿರಬೇಕು. ಇದಾಗಿದೆ ಮನಸ್ಸಿನ ಮಾತು. ಮತ್ತು ಕರ್ಮದಲ್ಲಿ ಉಳಿತಾಯ ಇರಬೇಕು, ಆಗ ಮನಸ್ಸು ಮತ್ತು ಕರ್ಮ ಎರಡೂ ಸರಿಯಾಗಿದ್ದರೆ ವಾಣಿ ಸರಿಯಾಗಿರುವುದು. ಈ ಎರಡು ಮಾತುಗಳ ಬಗೆಗೆ ವಿಶೇಷ ಗಮನವಿರಲಿ, ಒಬ್ಬನ ನೆನಪು ಮತ್ತು ಉಳಿತಾಯವನ್ನು ಸಾಕಾರ ರೂಪದಲ್ಲಿ ನೋಡಿದಿರಿ. ಆದ್ದರಿಂದ ಯಾವ ಮಂತ್ರವನ್ನು ಹೇಳುತ್ತಿದ್ದರೆಂದು ನೆನಪಿದೆಯಾ? ಕಡಿಮೆ ಖರ್ಚು ಹೆಚ್ಚು ಪ್ರಾಪ್ತಿ. (ಕಮ್ ಖರ್ಚ ಬಾಲಾನಶೀನ) ಉಳಿತಾಯದ ಜೊತೆಗೆ ಈ ಮಂತ್ರವನ್ನು ಮರೆಯಬೇಡಿ. ಉಳಿತಾಯವನ್ನು ಮಾಡಿ ಜೊತೆಗೆ ಅಷ್ಟೆ ಉದಾರಚಿತ್ತರಾಗಿ. ಉದಾರಚಿತ್ತದಲ್ಲಿ ಉಳಿತಾಯವೂ ಸಮಾವೇಶಗೊಂಡಿದೆ. ಇದನ್ನೇ ಕಡಿಮೆ ಖರ್ಚಿನಲ್ಲಿ ಹೆಚ್ಚು ಪ್ರಾಪ್ತಿಯೆನ್ನುವುದು.

ಇನ್ನುಳಿದವರಿಗಿಂತ ತಾವು ಹೆಚ್ಚು ಭಾಗ್ಯಶಾಲಿಯಾಗಿದ್ದೀರಿ ಏಕೆ? ಯಾರ ಮನೆಗೆ ಹೆಚ್ಚು ಅತಿಥಿಗಳು ಬರುತ್ತಾರೆ ಅವರು ಭಾಗ್ಯಶಾಲಿಗಳೆಂದು ಹೇಳುತ್ತಾರಲ್ಲವೇ? ಹಾಗಾಗಿ ನೀವು ಹೆಚ್ಚು ಭಾಗ್ಯಶಾಲಿಗಳು ಏಕೆಂದರೆ ಎಲ್ಲರಿಗಿಂತ ಹೆಚ್ಚು ಅತಿಥಿಗಳು ಇಲ್ಲಿಗೆ ಬರುತ್ತಾರೆ, ಆದರೆ ಆತಿಥ್ಯವನ್ನೂ ಮಾಡಬೇಕು. ತಮ್ಮ ಮನೆಯಿಂದಲೇ ಅವರು ಅತಿಥಿಗಳಾಗುವಂತೆ ಆತಿಥ್ಯವನ್ನು ಮಾಡಬೇಕು. ತಮ್ಮ ಆತಿಥ್ಯ ಅವರನ್ನು ಸದಾಕಾಲಕ್ಕೂ ಅತಿಥಿಗಳನ್ನಾಗಿ ಮಾಡಬೇಕು. ಈ ರೀತಿ ಸಾಕಾರದಲ್ಲಿ ಬಾಪ್ ದಾದಾ ಮಾಡಿ ತೋರಿಸುತ್ತಿದ್ದರು. ಈ ರೀತಿ ಒಂದು ದಿನದ ಆತಿಥ್ಯದಲ್ಲಿ ಪೂರ್ಣ ಜೀವನದ ಅತಿಥಿಗಳನ್ನಾಗಿ ಮಾಡಬೇಕು. ಇದನ್ನು

ಮಗ ತಂದೆಯನ್ನು ಹೋಲುತ್ತಾನೆ. ಎನ್ನುತ್ತಾರೆ. ಒಳ್ಳೆಯದು. ಈ ತರಗತಿಯಲ್ಲಿ ಎಲ್ಲರಿಗಿಂತ ಹೆಚ್ಚಿನ ಪುರುಷಾರ್ಥಿ ಯಾರು? ನಂಬರವನ್ ಯಾರು? ಒಬ್ಬರಿಗಿಂತ ಒಬ್ಬರು ಚೆನ್ನಾಗಿದ್ದೀರಿ. ಇದೊಂದು ಅದ್ಭುತ. ಇದೇ ಗುಂಪಿನಲ್ಲಿ ಎಲ್ಲರೂ ನಂಬರವನ್ ನಂಬರ ಪಡೆದಿರುವಿರಿ. ಏಕೆಂದರೆ ಕೆಲವರು ಒಂದು ಮಾತಿನಲ್ಲಿ, ಇನ್ನು ಕೆಲವರು ಇನ್ನೊಂದು ಮಾತಿನಲ್ಲಿ ವಿಶೇಷ ಪುರುಷಾರ್ಥ ಮಾಡಿರುವಿರಿ. ಆದ್ದರಿಂದ ಎಲ್ಲರೂ ನಂಬರವನ್ ಆಗಿದ್ದೀರಿ. ಈ ಗುಂಪು ಈ ನಂಬರವನ್ ನ ಠಪ್ಪಾ(ಮುದ್ರೆ) ತಮ್ಮ ಮೇಲೆ ಹಚ್ಚಿಸಿಕೊಂಡಿರುವಿರಿ. ಈ ನಂಬರವನ್ ನ ಮುದ್ರೆಯನ್ನು ಮರೆಯಬೇಡಿ, ಶಿಕ್ಷಣ, ಎಚ್ಚರಿಕೆ, ಮುದ್ರೆ ಮತ್ತು ಪರಸ್ಪರರನ್ನು ಮುಂದಿಟ್ಟುಕೊಂಡು ಉನ್ನತಿಯನ್ನು ಪಡೆಯುವುದು, ಈ ಮುಖ್ಯ ನಾಲ್ಕು ಮಾತುಗಳನ್ನು ಎಂದೂ ಮರೆಯದಿರಿ. ಒಳ್ಳೆಯದು.

ಅವ್ಯಕ್ತ ಮುರಳಿ 16-07-1969.

***ಮಧುಬನನಿವಾಸಿ ಗೋಪರ ಜೊತೆ ಬಾಪ್ ದಾದಾರವರ ಅವ್ಯಕ್ತ ಆತ್ಮಿಕ ಸಂಭಾಷಣೆ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸ್ನೇಹ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪರಿವರ್ತನೆಯ ಸಮಾರೋಹವನ್ನು ಆಚರಿಸಿಕೊಂಡಿರುವ ಪ್ರತ್ಯಕ್ಷ ಸ್ವರೂಪ.

2. ನಾನು ಶಕ್ತಿ ಮತ್ತು ಪಾಂಡವ ರೂಪವನ್ನು ಧಾರಣೆ ಮಾಡಿರುವ ಸಂಪೂರ್ಣ ಸ್ವರೂಪ.

3. ನಾನು ಸ್ನೇಹ ಮತ್ತು ಧೈರ್ಯ(ಸಾಹಸ) ಸ್ವರೂಪ.

4. ನಾನು ಪ್ರತ್ಯಕ್ಷ ಫಲವನ್ನು ಕಾಳಜಿಯಿಂದ ಸಂಬಾಳಿಸಿ ಬಾಪ್ ದಾದಾರವರಿಗೆ ಕೊಟ್ಟಿದ್ದೇನೆ.

5. ನಾನು ಸದಾ ಧೈರ್ಯದಿಂದ ಮತ್ತು ಪರಸ್ಪರ ಸ್ನೇಹವನ್ನು ಸ್ಥಿರವಾಗಿ ಉಳಿಸಿಕೊಂಡು ಜಯಜಯಕಾರಗಳಿಗೆ ಅರ್ಹನಾಗಿದ್ದೇನೆ.

6. ನನ್ನ ಅವ್ಯಕ್ತ ಸ್ಥಿತಿ ಮತ್ತು ಏಕ ರಸ ಸ್ಥಿತಿಯ ಧ್ವಜ ಇಡೀ ಪ್ರಪಂಚಕ್ಕೆ ಹಾರುತ್ತಾ ಕಾಣಿಸುತ್ತಿದೆ.

7. ನಾನು ಪರಿವರ್ತನೆಯ ಪ್ರತಿಜ್ಞೆಯ ಅವಿನಾಶಿ ಕಂಕಣಧಾರಿ.

8. ನಾನು ನನ್ನ ಬೆಲೆಯನ್ನು ತಿಳಿದುಕೊಂಡು ನಶೆಯಲ್ಲಿ ಇದ್ದೇನೆ.

9. ನಾನು ಮಧುಬನದ ಶೋಕೇಸ್ ನಲ್ಲಿರುವ ಅಮೂಲ್ಯ ರತ್ನ.

10. " ನಾನು ಯಾವ ಕರ್ಮ ಮಾಡುತ್ತೇನೆಯೋ, ನನ್ನನ್ನು ನೋಡಿ ನನ್ನ ಭಕ್ತರು, ಪ್ರಜೆಗಳು ಅದೇ ಕರ್ಮವನ್ನು ಮಾಡುತ್ತಾರೆ" ಎಂಬ ಸ್ಮೃತಿಯಲ್ಲಿ ಇರುವ ರಚಯಿತನು.

11. ನಾನು ನನ್ನ ಕರ್ಮದಿಂದ ನನ್ನ ಪ್ರಜೆಗಳನ್ನು, ಭಕ್ತರನ್ನು, ಮಂದಿರವನ್ನು, ವಿಗ್ರಹವನ್ನು, ಮತ್ತು ಮಂದಿರದ ಸ್ಥಾನವನ್ನು ಶ್ರೇಷ್ಠವಾಗಿ ತಯಾರು ಮಾಡಿಕೊಂಡಿದ್ದೇನೆ.

12. ನಾನು ಮನಸ್ಸಿನಿಂದ ಏಕನಾಮಿ (ಒಬ್ಬನ ನೆನಪಿನಲ್ಲಿರುವುದು) ಮತ್ತು ಕರ್ಮದಲ್ಲಿ ಎಕಾನಮಿ (ಉಳಿತಾಯ ಮಾಡುವುದು) ಯಾಗಿ ವಾಣಿಯನ್ನು ಸರಿ ಮಾಡಿಕೊಂಡಿದ್ದೇನೆ.

13. ನಾನು "ಕಡಿಮೆ ಖರ್ಚು, ಹೆಚ್ಚು ಪ್ರಾಪ್ತಿ" ಎಂಬ ಮಂತ್ರವನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

14. ನಾನು ಉದಾರ ಚಿತ್ತ (ವಿಶಾಲ ಹೃದಯ) ಸ್ವರೂಪ.

15. ನಾನು ನನ್ನ ಆಥಿತ್ಯದಿಂದ ಎಲ್ಲರನ್ನು ಸದಾಕಾಲಿಕ ಅತಿಥಿಗಳನ್ನಾಗಿ ಮಾಡಿ ತಂದೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

16. ನಾನು ಶಿಕ್ಷಣ, ಸಾವಧಾನ(ಎಚ್ಚರಿಕೆ), ಮುದ್ರೆ, ಪರಸ್ಪರರನ್ನು ಮುಂದಿಟ್ಟು ಉನ್ನತಿಯನ್ನು ಪಡೆಯುವುದು ಈ ನಾಲ್ಕು ಮುಖ್ಯ ಮಾತುಗಳನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಂಡಿದ್ದೇನೆ.